RNU AIR DHARWAD

OCTOBER 25, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ವೀರರಾಣಿ ಕಿತ್ತೂರು ಚೆನ್ನಮ್ಮನವರ,** ಬ್ರಿಟಿಷರ ವಿರುದ್ಧದ ಐತಿಹಾಸಿಕ ವಿಜಯದ, ದ್ವಿಶತಮಾನೋತ್ಸವ ಸ್ಮರಣಾರ್ಥ, ಭಾರತ ಸರ್ಕಾರ, 200 ರೂಪಾಯಿ ಮುಖ ಬೆಲೆಯ, ನಾಣ್ಯವನ್ನು ಬಿಡುಗಡೆ ಮಾಡಿದೆ. ಹರಿಹರದ ಶ್ರೀ ವಚನಾನಂದ ಸ್ವಾಮೀಜಿ ಸಾನಿಧ್ಯದಲ್ಲಿ, ಕೇಂದ್ರ ಸಂಸ್ಕೃತಿ ಖಾತೆ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರು, ಐತಿಹಾಸಿಕ ನಾಣ್ಯವನ್ನು ಲೋಕಾರ್ಪಣೆ ಗೊಳಿಸಿದರು.

<><><>

**ಹಾವೇರಿ ಸಂಸದ ಬಸವರಾಜ** ಬೊಮ್ಮಾಯಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ, ಕೃತಜ್ಞತೆ ಸಲ್ಲಿಸಿದ್ದಾರೆ.

<><><>

**ಕಿತ್ತೂರು ಕೋಟೆ ಆವರಣದಲ್ಲಿ** ಆಯೋಜಿತ, ಮೂರು ದಿನಗಳ ಕಿತ್ತೂರು ವಿಜಯೋತ್ಸವ, ಇಂದು, ಸಮಾರೋಪ ಗೊಳ್ಳಲಿದೆ.

<><><>

**ರಾಜ್ಯದಲ್ಲಿ 'ಬಂಡವಾಳ ಹೂಡಿಕೆದಾರ ಸ್ನೇಹಿ'** ವಾತಾವರಣ ಇನ್ನಷ್ಟು ಬಲಪಡಿಸುವ ಕುರಿತು, ಮುಖ್ಯಮಂತ್ರಿ ಸಿದ್ದರಾಮಯ್ಯ, ಬೆಂಗಳೂರಿನ ವಿಧಾನಸೌಧದಲ್ಲಿ, ವಿವಿಧ ಇಲಾಖೆಗಳ ಸಚಿವರು ಹಾಗೂ ಹಿರಿಯ ಅಧಿಕಾರಿಗಳೊಂದಿಗೆ, ಸಭೆ ನಡೆಸಿದರು. ಕೈಗಾರಿಕೆ ಖಾತೆ ಸಚಿವ ಎಂ.ಬಿ. ಪಾಟೀಲ, ಎಕ್ಸ್ ಮಾಧ್ಯಮದಲ್ಲಿ ಸಭೆಯ ಮಾಹಿತಿ ನೀಡಿ, ಈ ವರ್ಷ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ, 10 ಲಕ್ಷದ 27 ಸಾವಿರ ಕೋಟಿ ರೂಪಾಯಿ ಹೂಡಿಕೆ ಹರಿದು ಬಂದಿದೆ. ಶೇಕಡ 60ರಷ್ಟು ಈಗಾಗಲೇ, ಅನುಷ್ಠಾನದ ಹಂತದಲ್ಲಿದೆ. 1 ಲಕ್ಷ 50 ಸಾವಿರ ಕೋಟಿ ರೂಪಾಯಿಗೂ ಅಧಿಕ, ಹೊಸ ಹೂಡಿಕೆ ಪ್ರಸ್ತಾವಗಳು, ಪ್ರಗತಿಯಲ್ಲಿವೆ ಎಂದಿದ್ದಾರೆ.

<><><>

**ಪ್ರಧಾನಮಂತ್ರಿ ಮಾತೃ ವಂದನಾ ಯೋಜನೆಯ,** ಟೋಲ್–ಫ್ರೀ ಸಹಾಯವಾಣಿ ಸಂಖ್ಯೆ, 1–5–1–5, ನವೆಂಬರ್ 1 ರಿಂದ ಹೊಸದಾಗಿ, ಕಾರ್ಯಾರಂಭ ಮಾಡಲಿದೆ. ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ, ಈ ವಿಷಯ ತಿಳಿಸಿದೆ. ಈಗ ಅಸ್ತಿತ್ವದಲ್ಲಿರುವ 1–4–4–0–8 ಸಂಖ್ಯೆ, ಈ ತಿಂಗಳ 31ಕ್ಕೆ, ರದ್ದಾಗಲಿದೆ.

<><><>

**ಪೋಷಣ್ ಮತ್ತು ಪಿ.ಎಂ.,** ಎಂ.ವಿ.ವೈ.ಗೆ ಸಂಬಂಧಿಸಿದ ಪ್ರಶ್ನೆಗಳು ಹಾಗೂ ಮಾಹಿತಿ ಪಡೆಯಲು, ಏಕೀಕೃತ ಸಹಾಯವಾಣಿ 1–5–1–5 ಕಾರ್ಯನಿರ್ವಹಿಸಲಿದೆ.

<><><>

**ರಫ್ತು ಗುಣಮಟ್ಟದ ಮಾವು ಉತ್ಪಾದನೆ** ಹಾಗೂ ರಫ್ತು ವಿಧಾನಗಳು ಕುರಿತ ಕಾರ್ಯಾಗಾರ, ಇಂದು ಮತ್ತು ನಾಳೆ, ಧಾರವಾಡದ ಆಲೂರು ವೆಂಕಟರಾವ ಸಭಾ ಭವನದಲ್ಲಿ ಆಯೋಜಿತವಾಗಿದೆ. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ, ಮಾವು ಬೆಳೆಗಾರರ ಸಂಘದ, ಗೌರವಾಧ್ಯಕ್ಷ, ರಾಜೇಂದ್ರ ಪೋದ್ದಾರ.

<><><>

**ಕೇಂದ್ರ ಹಣಕಾಸು ಇಲಾಖೆ,** ಆರ್ಥಿಕ ವಲಯದಲ್ಲಿ, ಕ್ಲೇಮ್ ಪಡೆಯದ ಸ್ವತ್ತುಗಳ ದಕ್ಷ ಮತ್ತು ತ್ವರಿತ ಇತ್ಯರ್ಥಕ್ಕಾಗಿ, ಬರುವ ಡಿಸೆಂಬರ್ ವರೆಗೆ, ಮೂರು ತಿಂಗಳ ಕಾಲ, ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ, 'ನಿಮ್ಮ ಹಣ, ನಿಮ್ಮ ಹಕ್ಕು' ವಿಶೇಷ ಅಭಿಯಾನ ಆಯೋಜಿಸಿದೆ. ಶಿವಮೊಗ್ಗ ಜಿಲ್ಲೆ ಅಗ್ರಣಿ ಬ್ಯಾಂಕ್, ಕೇಂದ್ರ ವಾರ್ತಾ ಶಾಖೆ ಸಹಯೋಗದಲ್ಲಿ, ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ, 'ನಿಮ್ಮ ಹಣ, ನಿಮ್ಮ ಹಕ್ಕು' ಅಭಿಯಾನಕ್ಕೆ, ಅಪರ ಜಿಲ್ಲಾಧಿಕಾರಿ ಅಭಿಷೇಕ ಚಾಲನೆ ನೀಡಿದರು. ಶಿವಮೊಗ್ಗ ಜಿಲ್ಲೆಯ ವಿವಿಧ ಬ್ಯಾಂಕ್‌ಗಳಲ್ಲಿ, ಒಟ್ಟು 80 ಕೋಟಿ ರೂಪಾಯಿ ಹಣವಿದ್ದು, ವಾರಸುದಾರರು ಅಗತ್ಯ ದಾಖಲೆಗಳನ್ನು ನೀಡಿ ಹಣ ಪಡೆದುಕೊಳ್ಳಬಹುದು ಎಂದು, ಜಿಲ್ಲಾಧಿಕಾರಿ ತಿಳಿಸಿದರು.

<><><>

**ಫಲಾನುಭವಿ ಶಿವಕುಮಾರ ಮಾತನಾಡಿ,** ಕೆನರಾ ಬ್ಯಾಂಕ್‌ನಲ್ಲಿ ತಮ್ಮ ಹಣವಿದ್ದು, ಅದನ್ನು ಹೇಗೆ ಪಡೆದುಕೊಳ್ಳಬೇಕು ಎಂಬುದರ ಬಗ್ಗೆ ತಿಳಿಸಿದ್ದು, ಸಾಕಷ್ಟು ಅನುಕೂಲವಾಗಿದೆ ಎಂದರು.

<><><>

**ಸರಕು ಮತ್ತು ಸೇವಾ ತೆರಿಗೆ ಜಿ.ಎಸ್.ಟಿ.** ದರಗಳನ್ನು, ಕಡಿತಗೊಳಿಸಿದ ಹಿನ್ನೆಲೆ, ಕಾಫಿ ಬೆಳೆಗಾರರು, ಹೈನುಗಾರಿಕೆ, ಕರಕುಶಲ ಉತ್ಪನ್ನಗಳು, ಸಮುದ್ರ ಮೀನಿನ ಖಾದ್ಯಗಳ ಮೇಲಿನ ದರ, ಗಣನೀಯವಾಗಿ ಇಳಿಕೆಯಾಗಿ, ಜನಸಾಮಾನ್ಯರಿಗೆ ಅನುಕೂಲವಾಗಿದೆ.

<><><>

**ಇನ್‌ಸ್ಟಂಟ್ ಕಾಫಿ ಮೇಲೆ** ಶೇಕಡ 18 ರಷ್ಟಿದ್ದ ಜಿ.ಎಸ್.ಟಿ ಅನ್ನು, ಶೇಕಡ 5ಕ್ಕೆ ಇಳಿಸಲಾಗಿದೆ. ಕೊಡಗು, ಚಿಕ್ಕಮಗಳೂರು ಭಾಗದ, 6 ಲಕ್ಷದ 70 ಸಾವಿರ, ಸಣ್ಣ ಕಾಫಿ ಬೆಳೆಗಾರರಿಗೆ, ಹೆಚ್ಚು ಪ್ರಯೋಜನವಾಗಿದೆ.

<><><>

**ಹಾಲು, ಪನ್ನೀರ್ ಮೇಲಿನ** ಜಿ.ಎಸ್.ಟಿ, ಶೂನ್ಯಕ್ಕೆ ಇಳಿಸಲಾಗಿದೆ. ತುಪ್ಪ, ಮಜ್ಜಿಗೆ ಮೇಲೆ ವಿಧಿಸಲಾಗಿದ್ದ, ಜಿ.ಎಸ್.ಟಿ. ಶೇಕಡ 5ಕ್ಕೆ ಇಳಿದಿದೆ. ಇದರಿಂದಾಗಿ ಗ್ರಾಮೀಣ ಸಹಕಾರ ವಲಯದ 26 ಲಕ್ಷ ರೈತರಿಗೆ, ಉಳಿತಾಯವಾಗಿದೆ.

<><><>

**ಸಮುದ್ರ ಮೀನು ಹಾಗೂ ಖಾದ್ಯಗಳ** ಮೇಲಿನ ಜಿ.ಎಸ್.ಟಿ., ಶೇಕಡ 5ಕ್ಕೆ ಇಳಿಕೆಯಾಗಿದ್ದು, ಕರಾವಳಿ ಪ್ರದೇಶದಲ್ಲಿ, ಸಮುದ್ರ ಉತ್ಪನ್ನಗಳನ್ನು ನಂಬಿ ಜೀವನ ನಡೆಸುತ್ತಿರುವ ಮೀನುಗಾರರಿಗೆ ಹಾಗೂ ಕಿರು ಉದ್ಯಮಗಳಿಗೆ ಪೂರಕವಾಗಿದೆ.

<><><>

**ಸಿಮೆಂಟ್, ಗ್ರಾನೈಟ್, ಟ್ರಾಕ್ಟರ್,** ಯಂತ್ರೋಪಕರಣಗಳ ಬಿಡಿ ಭಾಗದ ಮೇಲಿನ ಜಿ.ಎಸ್.ಟಿ. ಶೇಕಡ 6 ರಿಂದ 8 ರ ಷ್ಟು ಕಡಿತವಾಗಿದೆ.

<><><>

**ಇಳಕಲ್ ಸೀರೆ ಸೇರಿದಂತೆ,** ಕರಕುಶಲ ವಸ್ತುಗಳ ಮೇಲಿನ ಜಿ.ಎಸ್.ಟಿ. ಶೇಕಡ 5ಕ್ಕೆ ಇಳಿಕೆಯಾಗಿದ್ದು, ನವೋದ್ಯಮಗಳಿಗೆ, ಸಹಕಾರಿಯಾಗಿದೆ.

<><><>

**ಕರಾವಳಿ ಭಾಗದ ಜನರಿಗೆ ಆರ್ಥಿಕ** ಉತ್ತೇಜನ ನೀಡಲು, ಗೋಡಂಬಿ ಹಾಗೂ ತೆಂಗಿನ ನಾರಿನ ಉತ್ಪನ್ನಗಳ ಮೇಲೆ, ಶೇಕಡ 5 ರಷ್ಟು ಜಿ.ಎಸ್.ಟಿ. ಕಡಿತದಿಂದ, ಮಹಿಳೆಯರು ನಡೆಸುವ, ಸಣ್ಣ, ಅತೀ ಸಣ್ಣ, ಸೂಕ್ಷ್ಮ ಹಾಗೂ ಮಧ್ಯಮ ಉದ್ಯಮಗಳು ಮತ್ತು ಕರಾವಳಿ ಜೀವನೋಪಾಯಕ್ಕೆ ಸಹಕಾರಿಯಾಗಿದೆ ಎಂದು, ಕೇಂದ್ರ ವಾರ್ತಾ ಶಾಖೆ ತಿಳಿಸಿದೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ,** ಆಕಾಶವಾಣಿಯ, ಬಹುಶ್ರುತ, ಮನ್ ಕಿ ಬಾತ್‌ನ, 127ನೇ ಆವೃತ್ತಿಯಲ್ಲಿ, ದೇಶ, ವಿದೇಶಗಳ ಭಾರತೀಯರೊಂದಿಗೆ, ತಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ಹಂಚಿಕೊಳ್ಳಲಿದ್ದಾರೆ. ನಾಳೆ ಭಾನುವಾರ, 26ನೇ ತಾರೀಖು, ಬೆಳಗ್ಗೆ 11 ಗಂಟೆಗೆ, ಮನದ ಮಾತು ಪ್ರಸಾರವಾಗಲಿದೆ. ಬಳಿಕ ಪ್ರಾದೇಶಿಕ ಭಾಷೆಯಲ್ಲಿ, ಮನದ ಮಾತು ಪ್ರಸಾರವಾಗಲಿದೆ.

<><><>

**ನವೆಂಬರ್ 1 ರಿಂದ, 30ರ ವರೆಗೆ,** ಕೇಂದ್ರ ಪಿಂಚಣಿ ಮತ್ತು ಪಿಂಚಣಿದಾರರ ಯೋಗಕ್ಷೇಮ ಸಚಿವಾಲಯ, ಜೀವಿತ ಪ್ರಮಾಣ ಪತ್ರ, ಡಿಜಿಟಲ್ ಲೈಫ್ ಸರ್ಟಿಫಿಕೆಟ್, ಸಲ್ಲಿಕೆ ಆಂದೋಲನ ದೇಶಾದ್ಯಂತ ಆಯೋಜಿಸಲಿದೆ.

<><><>

**ರಾಜ್ಯಾದ್ಯಂತ ಅಲ್ಲಲ್ಲಿ ಚದುರಿದಂತೆ** ಸಾಧಾರಣ ಮಳೆ ಹಾಗೂ ಕರಾವಳಿ ಸೇರಿದಂತೆ, ಮಲೆನಾಡು ಹಾಗೂ ದಕ್ಷಿಣ ಒಳನಾಡು ಜಿಲ್ಲೆಗಳಲ್ಲಿ ನಾಡಿದ್ದು, 27ರ ವರೆಗೆ, ಅಲ್ಲಲ್ಲಿ ಭಾರಿ ಮಳೆ ಸಾಧ್ಯತೆ ಇದೆ ಎಂದು, ರಾಜ್ಯ ವಿಕೋಪ ಪರಿಹಾರ ಉಸ್ತುವಾರಿ ಕೇಂದ್ರ ತಿಳಿಸಿದೆ. ವಿಜಯನಗರ ಜಿಲ್ಲೆಗೆ, ಯೆಲ್ಲೋ ಅಲರ್ಟ್ ಪ್ರಕಟಿಸಲಾಗಿದೆ.

**<><><>**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**